# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 890
ಸದಸ್ಯರ ಹೆಸರು : ಶ್ರೀ ಕೆ.ಪಿ. ನಂಜುಂಡಿ ವಿಶ್ವಕರ್ಮ
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 26-12-2022
ಉತ್ತರಿಸುವ ಸಚಿವರು : ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಂಪಿಯಲ್ಲಿ ಇರುವ ಶಿಲ್ಪಿಗಳು ಶಿಲ್ಪಗಳಿಗೆ ಜೀವಕಳೆ ತುಂಬಿರುವ ವಿಶ್ವಕರ್ಮ ಸಮಾಜದವರು ಎನ್ನುವುದು ಸರ್ಕಾರದ ಗಮನದಲ್ಲಿದೆಯೇ; | ಹೌದು. |
| ಆ) | ಇದ್ದಲ್ಲಿ, ಹಂಪಿ ಉತ್ಸವ ಸಂದರ್ಭದಲ್ಲಿ ವಿಶ್ವಕರ್ಮ ಸಮಾಜಕ್ಕೆ ಸೇರಿದ ಮುಖಂಡರುಗಳನ್ನಾಗಲಿ, ಸ್ವಾಮೀಜಿಗಳನ್ನಾಗಲಿ ಆ ಕಾರ್ಯಕ್ರಮದಲ್ಲಿ ಗೌರವಿಸದಿರುವುದು ಆ ಸಮಾಜಕ್ಕೆ ಮಾಡಿದ ಅವಮಾನವಲ್ಲವೇ; | ಕಳೆದ 2019-20ನೇ ಸಾಲಿನಲ್ಲಿ ಆಚರಣೆ ಮಾಡಿದ ಹಂಪಿ ಉತ್ಸವ ಕಾರ್ಯಕ್ರಮದ ಶಿಲ್ಪಕಲೆ ಶಿಬಿರ ಸಮಿತಿ ಹಾಗೂ ಚಿತ್ರಕಲಾ ಶಿಬಿರ ಸಮಿತಿಯ ಅಧ್ಯಕ್ಷರನ್ನಾಗಿ ವಿಶ್ವಕರ್ಮ ಸಮಾಜದವರಾದ ಶ್ರೀ ಮೋಹನ್ ಪಂಚಾಳ್ ಅವರನ್ನು ನೇಮಿಸಲಾಗಿತ್ತು. ಸದರಿಯವರ ನೇತೃತ್ವದಲ್ಲಿ ಶಿಬಿರಗಳನ್ನು ಆಯೋಜಿಸಿರುವುದು ವಿಶ್ವಕರ್ಮ ಸಮಾಜಕ್ಕೆ ನೀಡಿದ ಗೌರವವಾಗಿದೆ. |
| ಇ) | ಇನ್ನು ಮುಂದೆ ಪ್ರತಿ ವರ್ಷ ಆಚರಿಸುವ ಕಾರ್ಯಕ್ರಮದಲ್ಲಿ ಆಹ್ವಾನಿಸಲಾಗುವುದೇ? (ವಿವರ ನೀಡುವುದು) | ಹಂಪಿ ಉತ್ಸವ ಕಾರ್ಯಕ್ರಮವು ಸರ್ಕಾರಿ ಕಾರ್ಯಕ್ರಮವಾಗಿರುವುದರಿಂದ, ಶಿಷ್ಟಾಚಾರದನ್ವಯ ಕ್ರಮವಹಿಸಲಾಗುವುದು. |

**ಸಂಖ್ಯೆ: ಕಸಂವಾ 107 ಕವಿಸ 2022**

(ವಿ. ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.